1126 (1517) ಶ್ರೀ ಭರಮಗೌಡ (ರಾಜು) ಅಲಗೌಡ ಕಾಗೆ (ಕಾಗವಾಡ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕಾಗವಾಡ ಗ್ರಾಮ ಪಂಚಾಯತಿಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಆಡಿಟ್ ವರದಿಯಲ್ಲಿ ಎಷ್ಟು ಅವ್ಯವಹಾರ ನಡೆದಿದೆ ಎಂದು ತಿಳಿಸಿರುತ್ತಾರೆ ;

ಇ) ಈ ವಿಷಯದ ಬಗ್ಗೆ ಸರ್ಕಾರ ಯಾವ ಕ್ರಮ ಜರುಗಿಸಲಾಗಿದೆ ?

ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಹೌದು.

ಆ) 2001–04ರ ಮೂರು ವರ್ಷಗಳ ಆಡಿಟ್ ವರದಿಯಲ್ಲಿ ರೂ. 16,92,658/ ಗಳ ಆಕ್ಷೇಪಣೆಗಳಿದ್ದು ರೂ. 10,80,958/ ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

ಇ) ಈ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಇಬ್ಬರು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ ಹಾಗೂ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ. ಸಂಬಂಧಿಸಿದ ಅಧ್ಯಕ್ಷರುಗಳಿಂದ ವಿವರಣೆ ಕೋರಲಾಗಿದ್ದು, ಅದು ಬಂದ ನಂತರ ನಿಯಮಾವಳಿ ಪ್ರಕಾರ ಕ್ರಮ ಜರುಗಿಸಲಾಗುವುದು.

1129 (64) ಶ್ರೀ ಬಸವರಾಜ್ ಎ.ಎಸ್. (ಅರಸಿಕೆರೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆನೇಕಾಲು ರೋಗ ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಈವರೆಗೂ ಆನೇಕಾಲು ರೋಗಕ್ಕೆ ತುತ್ತಾಗಿರುವವರ ಸಂಖ್ಯೆ ಎಷ್ಟು ; (ವಿವರವನ್ನು ಜಿಲ್ಲಾವಾರು ನೀಡುವುದು) ;

ಇ) ಈ ರೋಗ ಹಬ್ಬಲು ಕಾರಣಗಳೇನು ಹಾಗೂ ಆನೇಕಾಲು ರೋಗದ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಈ) ಆನೇಕಾಲು ರೋಗಕ್ಕೀಡಾದ ವ್ಯಕ್ತಿಗಳು ಸರ್ಕಾರ ನೀಡಿದ್ದ ಔಷಧಿಯನ್ನು ಸೇವಿಸಿ, ಮೃತಪಟ್ಟಿರುವುದು ನಿಜವೇ ;

ಉ) ಈ ಬಗ್ಗೆ ವರದಿಗಳು ಬಂದಿವೆಯೇ ?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ.

	ಉಡುಪಿ	11007	86
ಬಾಗಲಕೋಟೆ	16855		5
ಉತ್ತರ ಕನ್ನಡ	12522		114
ರಾಯಚೂರು	8062		48